ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ,ಮೈಸೂರು, ವಿನೋಬಾ ರಸ್ತೆ, ಮೈಸೂರು.
E-mail: eemys@kpwd.gov.in
☎: Fax No. 0821- 2420810

ಸಂಖ್ಯೆ :ಕಾಇಂ:ಲೋಇ:ಮೈವಿಮೈ: ಎಇ-1: ಕಟ್ಟಡ ಸುರಕ್ಷತೆ: 2021-22

ರವರಿಗೆ,

ಮುಖ್ಯೋಪಾಧ್ಯಾಯರು ,
ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲೆ, ಗೊರೂರು ಗ್ರಾಮ,
ಮೈಸೂರು-570008

No. 569
07-07-2021

ಮಾನ್ಯರೇ,

ವಿಷಯ:- ಮೈಸೂರಿನ, ಗೊರೂರಿನಲ್ಲಿರುವ ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ : ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ಉಪವಿಭಾಗ, ಮೈಸೂರು ರವರ ಪತ್ರ ಸಂಖ್ಯೆ: 51/2021-22 ದಿನಾಂಕ: 16.04.2021

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ (1) ಸಹಾಯಕ ಕಾರ್ಯಪಾಲಕ ಅಭಿಯಂತರರು ನಂ.1 ಉಪವಿಭಾಗ, ಮೈಸೂರುರವರು ಮುಖ್ಯೋಪಾಧ್ಯಾಯರು ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲೆರವರ ಮನವಿ ಮೇರೆಗೆ ಮೈಸೂರಿನ, ಗೊರೂರಿನಲ್ಲಿರುವ ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ನಿಗದಿತ ನಮೂನೆಯಲ್ಲಿ ಸಲ್ಲಿಸಿರುತ್ತಾರೆ.

ದಿನಾಂಕ: **24.11.2020** ರಂದು ಮೈಸೂರಿನ, ಗೊರೂರಿನಲ್ಲಿರುವ ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲಾ ಕಟ್ಟಡವನ್ನು ಕಾರ್ಯಪಾಲಕ ಅಭಿಯಂತರರು, ಲೋಇ., ಮೈಸೂರು ವಿಭಾಗ, ಮೈಸೂರು. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ಉಪವಿಭಾಗ, ಮೈಸೂರು ರವರು ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲೆ ರವರ ನೋಂದಾಯಿತ ಸ್ಟ್ರಕ್ಚರಲ್ ಇಂಜಿನಿಯರ್ ರವರ ಉಪಸ್ಥಿತಿಯಲ್ಲಿ ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಕಟ್ಟಡವು ನೆಲಮಹಡಿ, ಹಾಗೂ ಒಂದು ಮೇಲು ಮಹಡಿಗಳನ್ನು ಒಳಗೊಂಡಿದ್ದು, ಕಟ್ಟಡದ ನಿರ್ಮಾಣ 2014ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ. ಸದರಿ ಕಟ್ಟಡದ ಸಿಲಿಂಗ್ ಎತ್ತರವು NBC Code-2016 ರನ್ವಯ 3.60 ಮೀಟರ್ ಇರಬೇಕಿದ್ದು, ಸದರಿ ಎತ್ತರವು 3.85 ಮೀಟರ್ ಇರುವುದು ಕಂಡು ಬಂದಿರುತ್ತದೆ. ಹಾಗೂ ಮೆಟ್ಟಿಲುಗಳನ್ನು NBC Code-2016 ರನ್ವಯ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಮುಂದುವರೆದು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ಉಪವಿಭಾಗ, ಮೈಸೂರು ರವರು ಉಲ್ಲೇಖ ಪತ್ರದಲ್ಲಿ ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ ದಿನಾಂಕ: 24-11-2020 ರಂದು Cadd Station Technologies pvt. Ltd, Mysore, ISO-9001: 2015 ರವರು Portable ultrasonic non-destructive Digital indicating Tester ಮುಖಾಂತರ ಹಾಗು Physical observation & Accordingly necessary field Tests ಪರೀಕ್ಷೆಗಳನ್ನು ಕೈಗೊಂಡು, ಸಮಾಲೋಚಕರೊಂದಿಗೆ ಉಪವಿಭಾಗದ ತಾಂತ್ರಿಕ ವರ್ಗವು ನಡೆಸಿರುವ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡುಬಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ.

- ಗುಡ್‌ಶೇಪರ್ಡ ಆಂಗ್ಲ ಮಾಧ್ಯಮ ಶಾಲೆ ರವರ ಮನವಿ ಪತ್ರಧಲ್ಲಿ ಸದರಿ ಕಟ್ಟಡವನ್ನು ಶ್ರೀರಾಂಪುರ ಗ್ರಾಮದ ಸರ್ವೇ ನಂ. 49/1 ರಲ್ಲಿ ನಿರ್ಮಿಸಲಾಗಿರುವುದಾಗಿ ತಿಳಿಸಿರುತ್ತಾರೆ. ಅದರಂತೆ, ಕಟ್ಟಡವನ್ನು ಸದರಿ ಸ್ಥಳದಲ್ಲಿ ನಿರ್ಮಿಸಲಾಗಿರುತ್ತದೆ.

- ಕಾರ್ಯದರ್ಶಿಗಳು, ಶ್ರೀರಾಂಪುರ ಗ್ರಾಮ ಪಂಚಾಯಿತಿಯಿಂದ ಅನುಮೋದನೆಯಾದ ಮೈಸೂರಿನ, ಗೊರೂರಿನಲ್ಲಿರುವ ಗುಡ್ ಶೇಫರ್ಡ್ ಆಂಗ್ಲ ಮಾಧ್ಯಮ ಶಾಲಾ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ.
- **Ultrasonic Pulse Velocity Test**
  Conducting Ultrasonic pulse velocity test for compressive strength of in-situ concrete on Columns, Beams and Slab at Critical points using **"PUNDIT 6" (Portable ultrasonic non-destructive Digital indicating Tester) ( M/s Proceq S.A.Switzerland Make)** ಉಪಕರಣದಲ್ಲಿ ಪರೀಕ್ಷೆಯನ್ನು **M/s CADD STATION TECHNOLOGIES Pvt. Ltd.** ಮೈಸೂರು ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.
- Recognizance, visual inspection of Building-cracks, distress, dampness etc. ಪರೀಕ್ಷೆಯನ್ನು **M/s CADD STATION TECHNOLOGIES Pvt. Ltd** ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಅದರಲ್ಲಿ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಿದ ನಂತರ ಮರು ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.
- ಕಟ್ಟಡವು **National Building code of India 2016** ರ ಮಾನದಂಡದಂತೆ ನಿರ್ಮಿಸಿ ಸುರಕ್ಷಿತವಾಗಿರುವುದಾಗಿ **Shahid Sharif M/s S.S. Associates, Consulting Engineers & Contractors** ರವರು ನೋಂದಣಿ ಸಂಖ್ಯೆ : 12712/2020-21, ನಂ 1919, ರಾಜೀವನಗರ ಮೊದಲನೇ ಹಂತ, ಮೈಸೂರು ರವರು ಧೃಢೀಕರಿಸಿ ನೀಡಿರುವ ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ.
- **National Building code of India 2016** ರ ಅನ್ವಯ Form for Certificate for Structural Design Sufficiency ಪ್ರಮಾಣ ಪತ್ರವನ್ನು **Shahid Sharif M/s S.S. Associates, Consulting Engineers & Contractors** ರವರು ನೋಂದಣಿ ಸಂಖ್ಯೆ : 12712/2020-21, ನಂ 1919, ರಾಜೀವನಗರ ಮೊದಲನೇ ಹಂತ, ಮೈಸೂರು ರವರು ನೀಡಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **M/s CADD STATION TECHNOLOGIES Pvt. Ltd & Shahid Sharif M/s S.S. Associates, Consulting Engineers & Contractors** ರವರು ನೋಂದಣಿ ಸಂಖ್ಯೆ : 12712/2020-21, ನಂ 1919, ರಾಜೀವನಗರ ಮೊದಲನೇ ಹಂತ, ಮೈಸೂರು ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡ ಪರಿಶೀಲಿಸಲಾಗಿ ಕಟ್ಟಡವು **"Structurally Stable"** ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡುಬಂದಿರುವುದರಿಂದ ಸದರಿ ಕಟ್ಟಡವು **"Structurally Stable"** ಇದೆ ಎಂದು ಪ್ರಸಕ್ತ ಶೈಕ್ಷಣಿಕ ಸಾಲಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ಲೋ.ಇ., ಮೈಸೂರು ವಿಭಾಗ,
ಮೈಸೂರು.